ತಿಮ್ಮನ ಎಣಿಕೆ ಇವತ್ತು ತಿಂದೆ ಹೋದ್ರು ಪರ್ವಾಗಿಲ್ಲ ಮಾಂಸ ಕೆಡ್ದಂಗೆ ಬೇಯ್ಸಿ ಇಟ್ಟು ಬಿಡನ ಎಂಬುದಾಗಿತ್ತು.

ಇಲ್ಲಿ ಯಣೆನ ಮುಂದಿದ್ದ ಜನಗುಳಿಗೆ ಈಗ ಹೋಗಿ ವಾದ್ಯದವ್ರನ್ನ ಕರ್ಕಂಡು ಬತ್ತಿನಿ ಎಂದು ಹೇಳೋಗಿದ್ದ ತಿಮ್ಮ ಅಲ್ಲಿ ಬಾರೆ ಹೊಲುತ್ತಕೋಗಿ ಗುಡ್ಲೊಳಗೆ ಮಾಂಸದ ತಪ್ಲಿಗೆ ಪುಳ್ಳೆ ಮುರ್ದಿಕ್ಯಂಡು ಕೂತ. ತಿಮ್ಮನ ಮನಸ್ಸು ಅಲ್ಲು ಕೂತಿತ್ತ ಕೂರಲಾರ್ದು. ಅಯ್ಯೊ ಮಂತಲಿ ಯಾರು ಬಂದ್ರೊ, ಯಣ ಎತ್ತಿರೊ ಏನೊ, ಯಾರು ನನ್ನ ಕೇಳಾಡ್ತಾವ್ರೊ ಎಂಬಿತ್ಯಾದಿ ತಳಮಳದಲ್ಲೆ ಸಾರು ಒಂದು ಕುದಿ ಕುದ್ದೆ ಬಿಟ್ಟಿತು.

ಅದೇ ವೇಗದಲ್ಲಿ ಸೈಕಲ್ ಹಾಕಿಕೊಂಡು ತಿಮ್ಮ ಊರು ತಲುಪಿದ. ಅಲೆ ಬರಬೇಕಾದವರೆಲ್ಲ ಬಂದಾಗಿತ್ತು. ಯಣೆಗೆ ಸ್ನಾನ ಬಟ್ಟೆ ಎಲ್ಲ ಆಗಿತ್ತು. ತಮ್ಟೆ ವಾದ್ಯದ ಜೊತೆ ಜೊತೆಗೆ ಯಣ ಎತ್ತೇ ಬಿಟ್ಟರು. ತೋಟುತ್ತಕೆ ತಗಂಡೋಗಿ ಪೂಜೆ ಪುನಸ್ಕಾರ ರೋದನ ಗೋಳಾಟದ ನಡುವೆಯೇ ತೋಡಿದ್ದ ಗುಂಡಿಗೆ ಶಾಸ್ತ್ರೋಕ್ತವಾಗಿ ಹೊತ್ತು ಮುಳುಗುವ ಮುನ್ನ ಪುಟ್ಟರ್ಸಿಯನ್ನ ಮಣ್ಣು ಮಾಡಿದರು...

ಇನ್ನ ಮನೆಗೆ ಬಂದಾಗ ಎಲ್ಲವೂ ಬಿಕೋ ಎನ್ನುತ್ತಿತ್ತು. ದೀಪ ನೋಡಲು ಬಂದವರು ಇತ್ತ ಮಿಟುಗಾಡುತ್ತಿದ್ದ ದೊಡಪ್ಪನ ಜೀವವನ್ನೂ ನೋಡಿ ಕನಿಕರಿಸಿ ಹೋಗುತ್ತಿದ್ದರು. ತಿಮ್ಮನಿಗೆ ಬಾರೆ ಹೊಲದ ಕಡೆಯ ಗ್ಯಾನ ಅತ್ತಿತು. ಅದೇ ವೇಗದಲ್ಲಿ ಸೈಕಲ್ ತುಳಿಯತೊಡಗಿದ. ಅದಾಗಲೆ ಕತ್ತಲು ಆವರಿಸತೊಡಗಿತ್ತು. ದೂರದಿಂದಲೇ ತಿಮ್ಮನ ಗುಡಿಸಲು ಅಸ್ಪಷ್ಟವಾಗಿ ಕಾಣಿಸುತ್ತಿದ್ದರಿಂದ ಅವನೊಳಗೆ ಹೊಗೆಯಾಡುತ್ತಿದ್ದ ಒಂದು ಅನುಮಾನ ಬಗೆ ಹರಿದಂತಾಗಿತ್ತು. ಗುಡಿಸಲು ಒಳ ಹೊಕ್ಕು ನೋಡಿದ. ಕೆಂಡವೆಲ್ಲ ಹಾರಿಹೋಗಿ ತಪ್ಲಿ ನಿಶ್ಚಲವಾಗಿ ಕೂತಿತ್ತು. ತಿಮ್ಮ ಅದರ ಬಾಯಿ ತೆಗೆದು ನೋಡಿದ. ಮಾಂಸ ಸಾರಿನ ಘಮಲು ಮೂಗಿಗೆ ಬಡಿಯಿತು. ಸೌಟಿನಲ್ಲಿ ಒಂದೆರೆಡು ಸುತ್ತು ತಿರುಗಿಸಿ ಅಡಿಕೆ ಪಟ್ಟೆಗೆ ಸಾರಿನ ಜೊತೆಗೆ ತುಂಡುಗಳನ್ನು ಕೆಡವಿಕೊಂಡ. ಇನ್ನೇನು ಕೈಯಲ್ಲಿ ಮುಟ್ಟಬೇಕೆನ್ನುವಷ್ಟರಲ್ಲಿ ಇಂದು ಮಣ್ಣಾದ ದೊಡವ್ವನೇ ಕಣ್ಣ ಮುಂದೆ ಬಂದಂತಾಯಿತು. ಮತ್ತೆ ಮತ್ತೆ ಪ್ರಯತ್ನಿಸಿದಾಗಲೂ ದೊಡವ್ವ ಧುತ್ತನೆ ಎದುರಿಗೆ ಬಂದು ನಿಂತುಕೊಳ್ಳತೊಡಗಿದಳು. ತಿಮ್ಮನಿಗೆ ಇಕ್ಕಟ್ಟಾಯಿತು. ಏನು ಮಾಡಿದರೂ ತುತ್ತು ಇಳಿಯದಾಯಿತು. ಅತ್ತಿತ್ತ ಮಾಗಾಡಿರು ನಡೆಯಲ್ಲ ಎಂದು ಎಲೆ ಬಿಸಾಕಲು ಮುಂದಾದ. ಅಷ್ಟರಲ್ಲಿ ತಿಮ್ಮನ ಹ್ಯಾಂಡ್ ಸೆಟ್ ಮೊಬೈಲ್ ರಿಂಗಣಿಸಿತು. 'ಹಲೋ' ಎಂದ ತಿಮ್ಮನಿಗೆ ಅತ್ತಕಡೆಯ ಶಂಕ್ರಿಯ ದನಿ, 'ಕರಿ ದೊಡಪ್ಪ ಯಂಗಂಗ ಆಡ್ತಾ ಐತೆ, ಅದುಳಿಯದು ಕಷ್ಟುಕ್ಕೆ ಬಂದ್ಯೆತೆ, ಮಾಂಸ ತಿನ್ಬೇಕು ಮಾಂಸ ತಿನ್ಬೇಕು ಅಂತಾ ಐತೆ, ಜನ ಇಷ್ಟೊತ್ನಲ್ಲಿ ಕೋಳಿ ಹಿಡ್ಕಣಕೆ ಪರದಾಡ್ತಾ ಅವ್ರೆ' ಎಂದಳು. ತಿಮ್ಮ ಎಸೆಯಲು ಸಿದ್ಧ ಮಾಡಿಕೊಂಡಿದ್ದ ತನ್ನ ಮಾಂಸದ ಕಡೆಗೆ ಆಸ್ಥೆಯಿಂದ ನೋಡಿದ.


### ಗುರುಪ್ರಸಾದ್ ಕಂಟಲಗೆರೆ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನವರು. ವೃತ್ತಿಯಲ್ಲಿ ಶಿಕ್ಷಕ. ಕತೆ ಕವಿತೆ ಆಸಕ್ತಿಯ ಕ್ಷೇತ್ರಗಳು. ಪ್ರಕಟಿತ ಪುಸ್ತಕಗಳು: 'ಗೋವಿನ ಜಾಡು', 'ಕೆಂಡದ ಬೆಳುದಿಂಗಳು' (ಕಥಾಸಂಕಲನಗಳು), 'ಕಪ್ಪು ಕೋಣಗಳು' (ಕವನ ಸಂಕಲನ), 'ದಲಿತ ಸಾಂಸ್ಕೃತಿಕ ಕಥನಗಳ ಅಧ್ಯಯನ' (ಸಂಶೋಧನೆ). 2019ರ 'ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆ'ಯಲ್ಲಿ ಅವರ ಕತೆಗೆ ಮೊದಲ ಬಹುಮಾನ ಬಂದಿದೆ.